**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಪುಟ್ಟಣ್ಣ, ಹಾಗೂ ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) ರವರುಗಳು ನಿಯಮ 72ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:**

**ಸೂಚನೆ:-** ಕರ್ನಾಟಕ ರಾಜ್ಯದಲ್ಲಿ ಡಿವೈಎಸ್‌ಪಿ ಹುದ್ದೆಗಳಿಗೆ ಪದೋನ್ನತಿ ಮತ್ತು ನೇರ ನೇಮಕಾತಿಗೆ ನಿಗಧಿಪಡಿಸಿದ್ದ ಹುದ್ದೆಗಳ ಪ್ರಮಾಣವು 50:50 ಇದ್ದು, ನಂತರ 66:33ಕ್ಕೆ ಇಳಿಸಲಾಗಿದ್ದು ತದ ನಂತರ 80:20 ಪ್ರಮಾಣಕ್ಕೆ ಕಡಿಮೆ ಮಾಡಲಾಗಿದೆ. ದೇಶದ ಇತರೆ ರಾಜ್ಯಗಳಲ್ಲಿ ಉದಾಹರಣೆಗೆ ತೆಲಂಗಾಣ ಮತ್ತು ಆಂದ್ರಪ್ರದೇಶ ರಾಜ್ಯಗಳಲ್ಲಿ ಡಿವೈಎಸ್‌ಪಿ ನೇಮಕಾತಿಗೆ ಶೇಕಡ 66.1/3 33.2/3 ಅನುಪಾತದಲ್ಲಿದ್ದು, ನಮ್ಮ ರಾಜ್ಯದಲ್ಲಿ ಮಾತ್ರ ಡಿವೈಎಸ್ ಪಿ ನೇರ ನೇಮಕಾತಿಗೆ ಶೇಕಡ 20ರ ಪ್ರಮಾಣದಲ್ಲಿ ನಿಗಧಿಪಡಿಸಲಾಗಿದೆ. ಡಿವೈಎಸ್‌ಪಿ ಹುದ್ದೆಗಳಿಗೆ ಸಂಬಂಧಿಸಿದಂತೆ ಡಿಜಿ ಕಛೇರಿಯಲ್ಲಿ ವೆಕೆನ್ಸಿ ರಿಜಿಸ್ಟರ್‌ನಲ್ಲಿ ತಪ್ಪಾಗಿ ಹುದ್ದೆ ಇಲ್ಲದಿದ್ದರು ಸಹ ಹುದ್ದೆ ಸೃಜಿಸಿ ಜೇಷ್ಠತಾ ಪಟ್ಟಿಯಲ್ಲಿ ನಿಯಮಗಳನ್ನು ಉಲ್ಲಂಘಿಸಿ ಭಾರಿ ಅಕ್ರಮ ಮಾಡಲಾಗಿದೆ. ಸಿ ಅಂಡ್ ಆರ್ ನಿಯಮದಡಿಯಲ್ಲಿ ಡಿವೈಎಸ್‌ಪಿ ಹುದ್ದೆಗಳಿಗೆ 2007, 2008, 2010ರಲ್ಲಿ ನೇರ ನೇಮಕಾತಿ ಮೂಲಕ ನೇಮಕವಾಗಿರುವವರಿಗೆ 5 ರಿಂದ 6 ವರ್ಷಗಳಲ್ಲಿ ಮುಂಬಡ್ತಿ ನೀಡಲಾಗಿದ್ದು, 2017ರಲ್ಲಿ ನೇಮಕವಾಗಿರುವವರಿಗೆ ಮುಂಬಡ್ತಿ ನೀಡದೆ ವಿನಾ ಕಾರಣ ವಿಳಂಬ ಮಾಡಲಾಗುತ್ತಿದೆ. ರಾಜ್ಯದಲ್ಲಿ ಐ.ಪಿ.ಎಸ್. ಅಧಿಕಾರಿಗಳಿಗೆ ಮಾತ್ರ ಪ್ರತಿ ವರ್ಷ ಡಿಸೆಂಬರ್ 31 ರಂದು ಜೇಷ್ಠತಾ ಪಟ್ಟಿ ತಯಾರಿಸಿ ಮುಂಬಡ್ತಿ ನೀಡಲಾಗುತ್ತಿದ್ದು, ಈ ವರ್ಷವು ಇವರಿಗೆ 2025ರ ಡಿಸೆಂಬರ್ 31ರಂದು ಮುಂಬಡ್ತಿ ನೀಡಲಾಗಿದೆ. ಆದರೆ ಸಿ ಅಂಡ್ ಆರ್ ನಿಯಮದಂತೆ ಡಿವೈಎಸ್‌ಪಿಗಳಿಗೂ ಪ್ರತಿ ವರ್ಷ ಡಿಸೆಂಬರ್ 31 ರಂದು ಜೇಷ್ಠತಾ ಪಟ್ಟಿ ತಯಾರಿಸಿ ಪದೋನ್ನತಿ ನೀಡಬೇಕಾಗಿರುತ್ತದೆ. ಆದರೆ ಜೇಷ್ಠತಾ ಪಟ್ಟಿ ತಯಾರಿಸದೆ ಮುಂಬಡ್ತಿ ವಿಳಂಬ ಮಾಡಿ ತಾರತಮ್ಯ ಮಾಡಲಾಗುತ್ತಿದೆ. ಇದರಿಂದ ಕರ್ನಾಟಕ ರಾಜ್ಯದಿಂದ ನೇರ ನೇಮಕಾತಿಗೊಂಡಿರುವ ಕನ್ನಡಿಗ ಡಿವೈಎಸ್‌ಪಿಗಳಿಗೆ ಮುಂಬಡ್ತಿ ನೀಡದೆ ತಾರತಮ್ಯ ಹಾಗೂ ಅನ್ಯಾಯವಾಗುತ್ತಿದೆ. ಇವುಗಳನ್ನು ಗಮನಿಸಿ ಮಾನ್ಯ ಕೆಎಟಿ ನ್ಯಾಯಾಲಯವು ದಿನಾಂಕ:06.02.2025ರಂದು ಜೇಷ್ಠತಾ ಪಟ್ಟಿಯಲ್ಲಿರುವ ನ್ಯೂನತೆಗಳನ್ನು ಸರಿಪಡಿಸಲು ಆದೇಶ ಮಾಡಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ದಿ:30.07.2025 ರಂದು ಏಕ ಸದಸ್ಯ ಸಮಿತಿ ರಚಿಸಲಾಗಿರುತ್ತದೆ. ಆದರೆ ಕೆ.ಎ.ಟಿ. ಆದೇಶ ಬಂದು 11 ತಿಂಗಳು ಆಗಿದ್ದು ಮಾನ್ಯ ಉಚ್ಚ ನ್ಯಾಯಾಲಯದಿಂದ ಕೆಎಟಿ ಆದೇಶವನ್ನು ಎತ್ತಿ ಹಿಡಿದಿದ್ದರು ಸಮಿತಿಯು ಇದುವರೆವಿಗೆ ಜೇಷ್ಠತಾ ಪಟ್ಟಿಯನ್ನು ಸರಿಪಡಿಸಿರುವುದಿಲ್ಲ. ಜೇಷ್ಠತಾ ಪಟ್ಟಿಯಲ್ಲಿರುವ ಎಲ್ಲ ನ್ಯೂನತೆಗಳನ್ನು ಸರಿಪಡಿಸಿ ವೇಕೆನ್ಸಿ ರಿಜಿಸ್ಟರ್ ಮತ್ತು ಜೇಷ್ಠತಾ ಪಟ್ಟಿಯಲ್ಲಿ ಈ ರೀತಿ ತಪ್ಪು ಮಾಡಿರುವ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಂಡು 2017ನೇ ಸಾಲಿನಲ್ಲಿ ನೇರ ನೇಮಕಾತಿಗೊಂಡಿರುವ ಡಿವೈಎಸ್‌ಪಿ ಗಳಿಗೆ ಕೂಡಲೇ ಮುಂಬಡ್ತಿ ನೀಡಬೇಕೆಂದು ಕೋರಲಾಗಿದೆ.

**ಉತ್ತರ:-** ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸರ್ಕಾರದ/ಇಲಾಖೆಯ ನೀತಿ ಮತ್ತು ಅವಶ್ಯಕತೆಗೆ ಅನುಗುಣವಾಗಿ ಅಳವಡಿಸಲಾಗುತ್ತದೆ. ಈ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಸೇವೆಗಳಿಗೆ ಸಂಬಂಧಿಸಿದಂತೆ ಅಧಿಸೂಚನೆ ಸಂ. ಜಿಎಡಿ 36 ಜಿಆರ್‌ಆರ್ ದಿನಾಂಕ:08.07.1960 ರಲ್ಲಿ ಡಿವೈಎಸ್‌ಪಿ(ಸಿವಿಲ್) ವೃಂದದ ಮಂಜೂರಾತಿ ಬಲದಲ್ಲಿ ನೇರ ಮತ್ತು ಮುಂಬಡ್ತಿ ಹುದ್ದೆಗಳನ್ನು 50:50 ಅನುಪಾತದಲ್ಲಿ ನೇಮಕ ಮಾಡಲು ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಅಳವಡಿಸಲಾಗಿರುತ್ತದೆ. ತದನಂತರ ಅಧಿಸೂಚನೆ

ದಿನಾಂಕ:06.10.1967 ರಲ್ಲಿ ಡಿವೈಎಸ್‌ಪಿ(ಸಿವಿಲ್) ವೃಂದದ ಮಂಜೂರಾತಿ ಬಲದಲ್ಲಿ ನೇರ ಮತ್ತು ಮುಂಬಡ್ತಿ ಹುದ್ದೆಗಳನ್ನು 33.1/3 66.2/3 ಅನುಪಾತದಲ್ಲಿ ನೇಮಕ ಮಾಡಲು ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಅಳವಡಿಸಲಾಗಿರುತ್ತದೆ. ಅಧಿಸೂಚನೆ ಸಂ. ಹೆಚ್‌ಡಿ 162 ಪೊಸಿಅ 2003, ದಿನಾಂಕ:23.12.2004 ರಲ್ಲಿ ಡಿವೈಎಸ್‌ಪಿ(ಸಿವಿಲ್) ವೃಂದದ ಮಂಜೂರಾತಿ ಬಲದಲ್ಲಿ ನೇರ ಮತ್ತು ಮುಂಬಡ್ತಿ ಹುದ್ದೆಗಳನ್ನು 20:80 ಅನುಪಾತದಲ್ಲಿ ನೇಮಕ ಮಾಡಲು ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಅಳವಡಿಸಲಾಗಿರುತ್ತದೆ. ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಡಿವೈಎಸ್‌ಪಿ(ಸಿವಿಲ್) ವೃಂದದ ಅಧಿಕಾರಿಗಳನ್ನು ನೇರ ನೇಮಕಾತಿ ಮತ್ತು ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುತ್ತದೆ.

ಸರ್ಕಾರದ ಅಧಿಸೂಚನೆ ಸಂ.ಹೆಚ್‌ಡಿ 268 ಪಿಇಜಿ 2021, ದಿನಾಂಕ:27.01.2022 ರಲ್ಲಿ ದಿನಾಂಕ:01.1.2021ರಲ್ಲಿದ್ದಂತೆ ಡಿವೈಎಸ್‌ಪಿ(ಸಿವಿಲ್) ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ, ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಶೀಲಿಸಿ, ಅಧಿಸೂಚನೆ ಸಂ.ಹೆಚ್‌ಡಿ 268 ಪಿಇಜಿ 2021, ದಿನಾಂಕ:07.03.2022 ರಲ್ಲಿ ಅಂತಿಮಗೊಳಿಸಲಾಗಿರುತ್ತದೆ. ಆದರೆ ಸದರಿ ಜೇಷ್ಠತಾ ಪಟ್ಟಿಯಲ್ಲಿ ಮುಂಬಡ್ತಿ ಹೊಂದಿರುವ ಡಿವೈಎಸ್‌ಪಿ ಸಂಖ್ಯೆ ಹೆಚ್ಚಾಗಿರುವುದಾಗಿ ಮತ್ತು ಬ್ಲಾಕ್‌ವಾರು ರಿಕ್ತ ಸ್ಥಾನದ ಮಾಹಿತಿಯನ್ನು ಪ್ರಕಟಿಸದೇ ಇರುವ ಸಂಬಂಧ ಶ್ರೀಮತಿ ಅನುಷಾ ಮತ್ತು ಇತರರು ಮಾನ್ಯ ಕೆಎಸ್‌ಎಟಿ ಯಲ್ಲಿ ಅರ್ಜಿ ಸಂ.5238-5263/2023 ನ್ನು ದಾಖಲಿಸಿರುತ್ತಾರೆ.

ಸದರಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯವು ದಿನಾಂಕ:06.02.2025ರ ಅಂತಿಮ ಆದೇಶದಲ್ಲಿ ಈ ಕೆಳಕಂಡಂತೆ ನಿರ್ದೇಶಿಸಿರುತ್ತದೆ.

i. The applications are allowed.
ii. The impugned seniority list bearing No. HD 268 PEJI 2021, dated: 07.03.2022 placed at Annexure-A10 prepared by respondent No. 1 is quashed.
iii. Respondents are directed to consider the objections raised by the applicants and redo the seniority list in accordance with guidelines issued by Government in Official Memorandum dated: 06.07.1976 and 14.12.1987.
iv. The respondents are directed to publish block wise vacancy position with effect from 2012 along with revised vacancy in each Category of Promotion and direct recruitment quota.
v. Respondent No 1 are directed not to issue any promotion from the cadre of Deputy Superintendent of Police to Superintendent of Police on the basis of impugned seniority list dated: 07.03.2022 (Annexure-A10) which is quashed forthwith.

ಮಾನ್ಯ ಕೆಎಸ್‌ಎಟಿಯು ಅರ್ಜಿ ಸಂ.5238-5263/2023ರಲ್ಲಿ ದಿನಾಂಕ:06.02.2025ರಂದು ನೀಡಿದ ತೀರ್ಪಿನನ್ವಯ ಡಿವೈಎಸ್‌ಪಿ(ಸಿವಿಲ್) ವೃಂದದ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ಸದರಿ ವಿಷಯದಲ್ಲಿ ಪರಿಣಿತಿ ಹೊಂದಿರುವ ಶ್ರೀ ಬಿ.ಕೆ. ಚಿನ್ನಮಾರಯ್ಯ, ನಿವೃತ್ತ ಸಮಾಜ ಕಲ್ಯಾಣಾಧಿಕಾರಿ ರವರನ್ನು ಸಲಹೆಗಾರರನ್ನಾಗಿ ನೇಮಿಸಲಾಗಿದ್ದು, ಸದರಿಯವರು ದಿನಾಂಕ 11.03.2026 ರಂದು ವರದಿ ಸಲ್ಲಿಸಿರುತ್ತಾರೆ. ಈ ವರದಿಯನ್ನಾಧರಿಸಿ ಡಿವೈ.ಎಸ್.ಪಿ. (ಸಿವಿಲ್) ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 97 ಪಿಇಜಿ 2025, 02.04.2026 ರಲ್ಲಿ ಪ್ರಕಟಿಸಿ,

ಆಕ್ಷೇಪಣೆಗಳನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ನೀಡಲಾಗಿರುತ್ತದೆ. ನಿಗದಿತ ಸಮಯದಲ್ಲಿ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಶೀಲಿಸಿ, ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗುವುದು.

ಸಂಖ್ಯೆ: ಒಇ 127 ಪಿಇಜಿ 2026

(ಡಾ. ಜಿ. ಪರಮೇಶ್ವರ)
ಗೃಹ ಸಚಿವರು